

“ಅಭಿಮಾನಿಗಳೇ ನನ್ನನ್ನು ಬೆಳೆಸಿದ್ದು, ಅವರನ್ನು ಯಾವತ್ತೂ ಬೇಸರ ಮಾಡುವುದಿಲ್ಲ. ಚಿತ್ರಮಂದಿರಕ್ಕೆ ಬಂದಾಗ ಪ್ರೇಮ ಇಂಥದ್ದೊಂದು ಪಾತ್ರವನ್ನು ಮಾಡಿದ್ದಾರೆ ಎಂದು ಖುಷಿಪಡಬೇಕು. ಇದುವರೆಗೂ ನನ್ನನ್ನು ನಡೆಸಿಕೊಂಡು ಬಂದಿದ್ದಾರೆ. ಮುಂದೆ ಸಹ ನಡೆಸಿಕೊಂಡು ಹೋಗುತ್ತಾರೆ ಎಂಬ ನಂಬಿಕೆ ಇದೆ.

# ಪ್ರೇಮಾ ಈಸ್ ಬ್ಯಾಕ್ ವೆಡ್ಡಿಂಗ್ ಗಿಫ್ಟ್ ತಂದ ಚಂದ್ರಮುಖಿ

ನಾಲ್ಕೈದು ವರ್ಷಗಳಾಗಿತ್ತು ಪ್ರೇಮಾ ಬಣ್ಣ ಹಚ್ಚಿ. ಉಪೇಂದ್ರ ಅಭಿನಯದ 'ಉಪೇಂದ್ರ ಮತ್ತೆ ಬಾ' ಚಿತ್ರದಲ್ಲಿ ನಟಿಸಿದ್ದೇ ಕೊನೆ. ಆ ನಂತರ ಅವರು ಯಾವೊಂದು ಚಿತ್ರದಲ್ಲೂ ನಟಿಸಿರಲಿಲ್ಲ. ಕಳೆದ ವರ್ಷದ ಕೊನೆಯಲ್ಲಿ ಅವರು ವೆಡ್ಡಿಂಗ್ ಗಿಫ್ಟ್ ಎಂಬ ಚಿತ್ರವನ್ನು ಒಪ್ಪಿಕೊಂಡಿದ್ದಾರೆ ಎಂಬ ಸುದ್ದಿ ಬಂದಿತ್ತು. ಹನುಮಂತನಗರದ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಚಿತ್ರ ಪ್ರಾರಂಭವಾಗಿ, ಚಿತ್ರೀಕರಣ ಸಹ ನಡೆದಿತ್ತು. ಈಗ ಆ ಚಿತ್ರ ಸದ್ದಿಲ್ಲದೆ ಮುಕ್ತಾಯವಾಗಿದೆ. 37 ದಿನಗಳಲ್ಲಿ ಚಿತ್ರತಂಡವು ಚಿತ್ರೀಕರಣ ಮುಗಿಸಿದೆ. ಚಿತ್ರ ಮುಗಿದ ವಿಷಯವನ್ನು ಹೇಳುವುದಕ್ಕೆ ಇತ್ತೀಚೆಗೆ ಚಿತ್ರತಂಡದವರು ಒಂದು ಪತ್ರಿಕಾಗೋಷ್ಠಿ ಕರೆದಿದ್ದರು. ಈ ಸಂದರ್ಭದಲ್ಲಿ ಪ್ರೇಮಾ ಹಲವು ವಿಷಯಗಳನ್ನು ಹಂಚಿಕೊಂಡಿದ್ದಾರೆ. ಏನದು ಎಂಬುದನ್ನು ಅವರ ಮಾತಿನಲ್ಲೇ ಕೇಳಿನೋಡಿ ...............

## ತಕ್ಷಣ ಒಪ್ಪಿಕೊಂಡೆ

ಸಾಮಾನ್ಯವಾಗಿ ನಾನು ಯಾವುದೇ ಕಥೆ ಕೇಳಿದರೂ, ಅದನ್ನು ಒಪ್ಪಿಕೊಳ್ಳುವುದಕ್ಕೆ ಎರಡು ದಿನ ತೆಗೆದುಕೊಳ್ಳುತ್ತೇನೆ. ಈ ಬಾರಿ ಕಥೆ ಕೇಳಿದ ತಕ್ಷಣ ಒಪ್ಪಿಕೊಂಡೆ. ಕಥೆ ಕೇಳುವುದಕ್ಕೆ ಅಮ್ಮನೂ ಜೊತೆಗೆ ಕೂತಿದ್ದರು. ನಿರ್ದೇಶಕರು ಕಥೆ ಹೇಳಿದ ಮೇಲೆ, ಅಮ್ಮನೂ ಏನೂ ಹೇಳಲಿಲ್ಲ. ನಾನು ಒಂದೆರೆಡು ನಿಮಿಷ ಮಾತನಾಡಲಿಲ್ಲ. ಕಥೆ ಇಷ್ಟವಾಯಿತು ತಕ್ಷಣವೇ ಒಪ್ಪಿಕೊಂಡೆ. ಈ ಸಿನಿಮಾ ಕಥೆ ಕೇಳಿದಾಗ ವಿಭಿನ್ನ ಎಂದನಿಸಿತು. ಏಕೆಂದರೆ, ಈ ಚಿತ್ರದಲ್ಲೊಂದು ಸಂದೇಶ ಇದೆ. ಅದನ್ನು ಕೇಳಿ ಖುಷಿಯಾಯಿತು. ಕೆಲಸ ಕೂಡಾ ಒತ್ತಡ ಇರಲಿಲ್ಲ. ಬಹಳ ನೀಟ್ ಆಗಿ ಮಾಡಿ ಮುಗಿಸಿದ್ದಾರೆ. ನಿರ್ದೇಶಕರಿಗೆ ಯಾವ ತರಹ ಬೇಕಿತ್ತೋ, ಅದನ್ನು ತೆಗೆದುಕೊಂಡರು. ಮೊದಲ ಬಾರಿಗೆ ನಾನು ಇಂಥದ್ದೊಂದು ಪಾತ್ರ ಮಾಡುತ್ತಿದ್ದೇನೆ. ಬಹಳ ವಿಭಿನ್ನವಾಗಿದೆ. ಬಹಳ ಎಂಜಾಯ್ ಮಾಡಿಕೊಂಡು ಈ ಚಿತ್ರ ಮಾಡಿದ್ದೇನೆ. ಒಟ್ಟು 15 ದಿನಗಳ ಕಾಲ ಚಿತ್ರೀಕರಣ ಮಾಡಿದ್ದೀನಿ.

## ಈ ತರಹ ಪಾತ್ರ ಇದೇ ಮೊದಲು

ಈ ತರಹ ಪಾತ್ರ ನಾನು ಮಾಡುತ್ತಿರುವುದು ಇದೇ ಮೊದಲು. ನಾನು ಎಲ್ಲ ಪಾತ್ರಗಳನ್ನೂ ಒಪ್ಪುವುದಿಲ್ಲ. ಒಬ್ಬ ನಿರ್ದೇಶಕರು ನಾನೇ ಬೇಕು ಎಂದು ಬಂದರೆ, ಅವರಿಗೆ ನನ್ನಿಂದ ಏನು ಮಾಡಿಸಬೇಕೆಂದು ಗೊತ್ತಿರುತ್ತದೆ. ಈ ಚಿತ್ರದ ನಿರ್ದೇಶಕರು ಸಹ ನನಗೆ ಬೇರೆ ತರಹದ ಪಾತ್ರವನ್ನು ತಂದಿದ್ದರು. ಚಿತ್ರದಲ್ಲಿ ಒಂದು ಒಳ್ಳೆಯ ಸಂದೇಶವಿದೆ. ಅದಕ್ಕಿಂತ ಹೆಚ್ಚಾಗಿ ನನಗೆ ಅವರ ಪ್ಲಾನಿಂಗ್ ಇಷ್ಟ ಆಯಿತು. ಯಾವ ದಿನ ಎಷ್ಟು ತೆಗೆಯಬೇಕು ಎಂದು ಅವರಿಗೆ ಚೆನ್ನಾಗಿ ಗೊತ್ತಿತ್ತು. ಈ ಡೇಟ್‌ಗೆ ಈ ದೃಶ್ಯ ಚಿತ್ರೀಕರಣ, ಇನ್ನೊಂದು ಡೇಟ್‌ಗೆ ಇನ್ನೊಂದು ಎಂದು ಮೊದಲೇ ಪ್ಲಾನ್ ಮಾಡಿಕೊಂಡಿದ್ದರು. ಅದಕ್ಕೆ ಸರಿಯಾಗಿ ಮಾಡಿದರು.

## ಯಾವತ್ತೂ ಸಿದ್ಧತೆ ಮಾಡಿಕೊಳ್ಳುವುದಿಲ್ಲ

ಸಾಮಾನ್ಯವಾಗಿ ನಾನು ಯಾವುದೇ ಪಾತ್ರಕ್ಕೂ ಯಾವುದೇ ಸಿದ್ಧತೆ ಮಾಡಿಕೊಳ್ಳುವುದಿಲ್ಲ. ಇದಕ್ಕೂ ಮಾಡಿಕೊಂಡಿಲ್ಲ. ಗೆಟಪ್ ಹಾಕಿದ ತಕ್ಷಣ ಬಾಡಿ ಲಾಂಗ್ವೇಜ್, ಎಕ್ಸ್‌ಪ್ರೆಶನ್ ಬರುತ್ತದೆ. ಏಕೆಂದರೆ, ಜನ ನೋಡುತ್ತಾರೆ ಎಂಬ ಭಯವಿದ್ದೇ ಇರುತ್ತದೆ. ಹಾಗಾಗಿ, ಮಾನಿಟರ್ ಮಾಡಿಮಾಡಿ ನಂತರ ಟೇಕ್‌ಗೆ ಹೋಗುತ್ತೇನೆ. ನಿರ್ದೇಶಕರು ಟೈಮ್ ಕೊಟ್ಟು, ನನಗೆ ಇದೇ ರೀತಿ ಬೇಕು ಎಂದು ಹೇಳಿದರು. ಈ ತರಹವೇ ಪಾತ್ರ ಮಾಡಬೇಕು ಎಂದಿದ್ದರು. ಸ್ವಲ್ಪ ಭಯವಿತ್ತು. ಅವರು ಹೇಳಿದ ರೀತಿ ಪಾತ್ರ ಮೂಡಿಬರುತ್ತದಾ ಎಂಬ ಗೊಂದಲ ಇತ್ತು. ಕೊನೆಗೆ ಚೆನ್ನಾಗಿ ಬಂದಿದೆ ಎಂದು ಅವರು ಹೇಳಿದ್ದಾರೆ. ನನ್ನ ಸ್ಟೈಲ್‌ಲ್ಲಿ ಅವರಿಗೆ ಯಾವ ರೀತಿ ಬೇಕೋ, ಆ ರೀತಿ ಮಾಡಿದ್ದೇನೆ. ಪಾತ್ರಕ್ಕೆ ನ್ಯಾಯ ಸಲ್ಲಿಸಿದ್ದೇನೆ ಎಂದನಿಸುತ್ತದೆ. ಮೊದಲ ಕಾಪಿ ನೋಡಿದಾಗ ಗೊತ್ತಾಗುತ್ತದೆ.







## ಯಾವತ್ತೂ ಬೇಸರ ಮಾಡುವುದಿಲ್ಲ

ಅಭಿಮಾನಿಗಳೇ ನನ್ನನ್ನು ಬೆಳೆಸಿದ್ದು, ಅವರನ್ನು ಯಾವತ್ತೂ ಬೇಸರ ಮಾಡುವುದಿಲ್ಲ. ಚಿತ್ರಮಂದಿರಕ್ಕೆ ಬಂದಾಗ ಪ್ರೇಮ ಇಂಥದ್ದೊಂದು ಪಾತ್ರವನ್ನು ಮಾಡಿದ್ದಾರೆ ಎಂದು ಖುಷಿಪಡಬೇಕು. ಇದುವರೆಗೂ ನನ್ನನ್ನು ನಡೆಸಿಕೊಂಡು ಬಂದಿದ್ದಾರೆ. ಮುಂದೆ ಸಹ ನಡೆಸಿಕೊಂಡು ಹೋಗುತ್ತಾರೆ ಎಂಬ ನಂಬಿಕೆ ಇದೆ. ಅವರಿಗೆ ಯಾವತ್ತೂ ಬೇಸರ ಮಾಡುವುದಿಲ್ಲ. ನಾನು ಮಾಡುವ ಪ್ರತಿ ಪಾತ್ರಕ್ಕೂ ನ್ಯಾಯ ಸಲ್ಲಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಬಹಳಷ್ಟು ವರ್ಷ ಅಭಿಮಾನಿಗಳನ್ನು ಮಿಸ್ ಮಾಡಿಕೊಂಡೆ. ಆದರೆ, ಚಿತ್ರಮಂದಿರಕ್ಕೆ ಬಂದು ಪ್ರೇಮಾ ಯಾಕೆ ಈ ರೀತಿಯ ಸಿನಿಮಾ ಮಾಡಿದೆ ಎಂದು ಬೈಬಾರದು. ಅದು ನನಗೆ ಬೈದ ಹಾಗೆ ಆಗುತ್ತದೆ. ಹಾಗಾಗಿ ಒಳ್ಳೆಯ ಪಾತ್ರ ಸಿಕ್ಕರೆ ಮಾತ್ರ ನಟಿಸುತ್ತೇನೆ. ಇಲ್ಲ ಎಂದರೆ ಖಂಡಿತಾ ಸಿನಿಮಾ ಮಾಡುವುದಿಲ್ಲ. ನನಗೆ ಬೇಡವೂ ಬೇಡ. ಇಷ್ಟೆಲ್ಲ ಮಾಡಿಕೊಂಡು ಬಂದು, ಯಾವುದೋ ಚಿಕ್ಕ ಪಾತ್ರ ಮಾಡುವುದಕ್ಕೆ ಇಷ್ಟ ಇಲ್ಲ.

## ಪುನೀತ್ ವಾಟ್ ಎ ಸ್ಟೈಲಿಶ್ ಮ್ಯಾನ್

ಪುನೀತ್ ಅವರನ್ನು ನಾನು ಬಹಳಷ್ಟು ವರ್ಷಗಳಿಂದ ನೋಡಿಕೊಂಡು ಬಂದಿದ್ದೇನೆ. ಯಾವಾಗಲೂ ಪ್ರೇಮಾ ಪ್ರೇಮಾ ಎಂದು ಖುಷಿಯಿಂದ ಮಾತನಾಡುತ್ತಿದ್ದರು. ಅವರ ಎಕ್ಸೈಟ್‌ಮೆಂಟ್ ನೋಡಿ ನನಗೂ ಖುಷಿಯಾಗೋದು. ಅವರು ನಿಜಕ್ಕೂ ತೀರಿಕೊಂಡಿಲ್ಲ. ಅವರು ಎಲ್ಲರ ಮನಸ್ಸಲ್ಲೂ ಇದ್ದಾರೆ. ನನ್ನ ಮನಸ್ಸಲ್ಲೂ ಇದ್ದಾರೆ. ಅವರ ಯಾವುದೇ ಫೋಟೋ ನೋಡಿದರೂ, ಅದರಲ್ಲಿ ಅವರ ನಗು ಎದ್ದು ಕಾಣುತ್ತದೆ. ಅವರ ಮುಖದಲ್ಲಿ ಎಂತಹ ಲಕ್ಷಣ ಇತ್ತು, ಈಗ ಅದು ನೋಡುವುದಕ್ಕೆ ಸಿಗುವುದಿಲ್ಲ ಎಂದರೆ ಬೇಸರವಾಗುತ್ತದೆ. ಅವರು ಎಲ್ಲೂ ಹೋಗಿಲ್ಲ, ಇನ್ನೂ ಇದ್ದಾರೆ. ಅವರ ಜತೆಗೆ ನಟಿಸಬೇಕಿತ್ತು, ಒಂದು ಡ್ಯಾನ್ಸ್ ಮಾಡಬೇಕಿತ್ತು ಎಂಬ ಆಸೆ ಇತ್ತು. ಆದರೆ, ಅವಕಾಶ ಸಿಗಲಿಲ್ಲ. ಟಿವಿಯಲ್ಲಿ ಅವರ ಡ್ಯಾನ್ಸ್ ನೋಡಿದಾಗ, ವಾಟ್ ಎ ಸ್ಟೈಲಿಶ್ ಮ್ಯಾನ್ ಅಂತ ಖುಷಿಪಡುತ್ತೇನೆ.■

